



# ಅಲಂಕಾರಕ್ಕೆ ಫೌಂಟನ್ ಬುಷ್

ಚಿತ್ರ– ಲೇಖನ:
**ಮಂಜುನಾಥ ಡಿ.ಎಸ್**

ನೀಳವಾದ, ಮೇಲ್ನೋಟಕ್ಕೆ ಪತ್ರರಹಿತವಾಗಿ ಕಾಣುವ ಅಸಂಖ್ಯ ಹಾಗೂ ಒತ್ತಾದ ಕಾಂಡಗಳಲ್ಲಿ ನೆಲದೆಡೆಗೆ ಬಾಗಿ ತೊನೆಯುತ್ತಿರುವ ಕಿರುಗಾತ್ರದ, ಕೆಂಬಣ್ಣದ ಹೇರಳ ಹೂಗಳಿರುವ ಸಸ್ಯವೇ ಫೌಂಟನ್ ಬುಷ್. ತುದಿಯಲ್ಲಿ ನಾಲ್ಕು ದಳಗಳುಳ್ಳ ಕೊಳವೆಯಾಕಾರದ ಹೂಗಳು ಸುಮಾರು 3 ಸೆಂಟಿಮೀಟರ್ ಉದ್ದವಿರುತ್ತವೆ. ದಂತಬಿಳಿ ಮತ್ತು ನಸುಗೆಂಪು ವರ್ಣದ ಕುಸುಮಗಳೂ ಕಾಣಸಿಗುತ್ತವೆ. ನಾಲ್ಕೈದು ಅಡಿ ಎತ್ತರದ ಈ ಸಸ್ಯವನ್ನು ಪ್ರಮುಖವಾಗಿ ಅಲಂಕಾರಿಕ ಕಾರಣಗಳಿಗಾಗಿ ಬೆಳೆಸುತ್ತಾರೆ. ಈ ಸಸ್ಯದ ಹೂಗಳು ಚಿಟ್ಟೆಗಳು ಮತ್ತು ದುಂಬಿಗಳನ್ನು ಆಕರ್ಷಿಸುತ್ತವೆ.

ಸ್ಕ್ರೋಫ್ಯುಲಾರಿಯೇಸಿಯೆ ಕುಟುಂಬಕ್ಕೆ ಸೇರಿದ ಈ ಗಿಡದ ಶಾಸ್ತ್ರೀಯ ಹೆಸರು ರುಸೇಲಿಯ ಈಕ್ವಿಸೀಟಿ ಫಾರ್ಮಿಸ್. ಸ್ಕಾಟಿಷ್ ನಿಸರ್ಗವಾದಿ ಅಲೆಕ್ಸಾಂಡರ್ ರಸೆಲ್ (1715–1768) ಗೌರವಾರ್ಥ ಈ ಸಸ್ಯಕ್ಕೆ ರುಸೇಲಿಯ ಎಂದು ನಾಮಕರಣ ಮಾಡಲಾಗಿದೆ. ಲ್ಯಾಟಿನ್ ಭಾಷೆಯ ಈಕ್ವಿಸೀಟಿಫಾರ್ಮಿಸ್ ಪದದ ಅರ್ಥ ‘ಕುದುರೆ ಬಾಲದ ಕುಚ್ಚನ್ನು ಹೋಲುವ’ ಎಂಬುದಾಗಿದೆ.

ಈ ಸಸ್ಯ ಮೆಕ್ಸಿಕೊ ಮೂಲದ್ದಾಗಿದೆ. ಇದರ ಎಲೆ ಮತ್ತು ಕಾಂಡಗಳ ಸಾರವನ್ನು ಸೌಂದರ್ಯವರ್ಧಕಗಳ ಉತ್ಪಾದನೆಯಲ್ಲಿ ಉಪಯೋಗಿಸಲಾಗುತ್ತದೆ. ಈ ಸಸ್ಯವನ್ನು ಉರಿಯೂತ, ಸೆಳೆತ, ಮಧುಮೇಹ, ಮಲೇರಿಯ ಮತ್ತು ಅರ್ಬುದ ಕಾಯಿಲೆಗಳ ನಿವಾರಣೆಗಾಗಿ ಬಳಸಲಾಗುತ್ತದೆ. ಕೇಶವರ್ಧಕ ಗುಣವೂ ಇದಕ್ಕಿದೆಯೆಂದು ಹೇಳಲಾಗುತ್ತದೆ. ಕೊಲಂಬಿಯದಲ್ಲಿ ಮೂತ್ರಕೋಶದ ಹರಳು ಕರಗಿಸಲು ಈ ಸಸ್ಯ ಬಳಕೆಯಾಗುತ್ತಿದೆ.